# ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

## ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ 2024

**ವಿಷಯ : ಪ್ರಥಮ ಭಾಷೆ ಕನ್ನಡ** | **ಪತ್ರಿಕೆ–1** | **ಸಂಕೇತ ಸಂಖ್ಯೆ : 01K**

**ಸಮಯ : 3.15 ನಿಮಿಷ** | **ಗರಿಷ್ಠ ಅಂಕಗಳು : 100**

---

**I. ಕೆಳಗಿನ ಪಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ .** **6X1=6**

1) **'ಪ್ರಾಣಾಹುತಿ'** ಪದದಲ್ಲಿರುವ ಅವರ್ಗೀಯ ವ್ಯಂಜನ;
   - ಎ) ಪ್ರಾ    ಬಿ) ಣಾ
   - ಸಿ) ಹು    ಡಿ) ತಿ
2) 'ಜಾತ್ಯತೀತ' ಪದವನ್ನು ಬಿಡಿಸಿದಾಗ ಆಗುವ ಸಂಧಿ;
   - ಎ) ಯಣ್‌ಸಂಧಿ    ಬಿ) ಸವರ್ಣದೀರ್ಘಸಂಧಿ
   - ಸಿ) ಗುಣಸಂಧಿ    ಡಿ) ವೃದ್ಧಿಸಂಧಿ
3) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ;
   - ಎ) ಸಾಮಾನ್ಯವಾಕ್ಯ    ಬಿ) ಮಿಶ್ರವಾಕ್ಯ
   - ಸಿ) ಪ್ರಶ್ನಾರ್ಥಕವಾಕ್ಯ    ಡಿ) ಸಂಯೋಜಿತವಾಕ್ಯ
4) ಅಯ್ಯೋ ಹೀಗಾಗಬಾರದಿತ್ತು – ಇಲ್ಲಿ ಬಳಕೆಯಾಗಬೇಕಿರುವ ಲೇಖನ ಚಿಹ್ನೆ;
   - ಎ) ಪೂರ್ಣವಿರಾಮ ಚಿಹ್ನೆ    ಬಿ) ಉದ್ಧರಣ ಚಿಹ್ನೆ
   - ಸಿ) ಭಾವಸೂಚಕ ಚಿಹ್ನೆ    ಡಿ) ವಾಕ್ಯವೇಷ್ಠನ ಚಿಹ್ನೆ
5) ಸಪ್ತಮೀ ವಿಭಕ್ತಿಯ ಕಾರಕಾರ್ಥ ಪದವಿದು;
   - ಎ) ಸಂಪ್ರದಾನ    ಬಿ) ಅಪದಾನ
   - ಸಿ) ಸಂಬಂಧ    ಡಿ) ಅಧಿಕರಣ
6) ವರ್ತಮಾನ ಕೃದಂತಕ್ಕೆ ಉದಾಹರಣೆಯಾದ ಪದವಿದು;
   - ಎ) ಓಡುವ    ಬಿ) ನೋಟ
   - ಸಿ) ಬರೆದ    ಡಿ) ತಿನ್ನದ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4X1=4**

7) ವನಧಿ : ಸಮುದ್ರ : : ಶಾಲಿವನ : ____________
8) ಕೆನೆಮೊಸರು : ಜೋಡುನುಡಿ : : ಬಟ್ಟಬಯಲು : ___________
9) ಅವನೇ : ಅವಧಾರಣಾರ್ಥಕಾವ್ಯಯ : : ತರುವಾಯ : ____________
10) ವಿದ್ಯಾಧರ : ಬಿಜ್ಜೋಧರ : : ಕುಠಾರ : ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7X1=7**

11) ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ?
12) ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
13) ಸುಕುಮಾರಸ್ವಾಮಿಯ ತಂದೆ ತಾಯಿಗಳ ಹೆಸರೇನು?
14) ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?
15) ಮಾದ್ರಿ ಯಾರು?
16) ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳಾವುವು?
17) ಮುದ್ದಣ ಕವಿ ಗೋವಿಂದ ಪೈ ರವರಿಗೆ ಏನೆಂದು ಸಲಹೆಯನ್ನು ಕೊಟ್ಟರು?

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**IV. ಕೆಳಗಿನ ಪ್ರಶ್ನೆಗಳಿಗೆ ಮೂರೂ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10X2=20**

18) ಪೊಯೆಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?

19) ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳೇನು?

20) ಸರ್. ಎಂ. ವಿಶ್ವೇಶ್ವರಯ್ಯನವರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕಿದ್ದು ಹೇಗೆ?

21) ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?

22) ಹಕ್ಕಿಯು ಯಾವ ಮೇರೆ ಮೀರಿ, ನೀರನ್ನು ಹೀರಿದೆ?

23) ಯುದ್ಧದ ವಿಚಾರದಲ್ಲಿ ಕರ್ಣನ ನಿರ್ಧಾರವೇನು ?

24) ಸ್ವಾಮಿ ವಿವೇಕಾನಂದರು ಭಾರತೀಯರನ್ನು ಯಾವ ರೀತಿ ಎಚ್ಚರಗೊಳಿಸಿದ್ದಾರೆ?

25) ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.

26) ಭಗತ್‌ಸಿಂಗ್ ಯಾವುದನ್ನು ತನಗೆ ಸಿಕ್ಕ ಪಾರಿತೋಷಕವೆಂದು ತಿಳಿದಿದ್ದ?

27) ವಸಂತ ಮುಖ ತೋರಲಿಲ್ಲ ಕವನದಲ್ಲಿ ಪುಟ್ಟಿಯ ಪ್ರಶ್ನೆಗಳೇನು?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2X3=6**

28) ಡಾ. ಡಿ. ಎಸ್. ಜಯಪ್ಪಗೌಡ

29) ಪಂಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ :** 1X3=3

30) ರಂಕುಸವಿಟ್ಟಡೊಂ ನೆನೆವುದೆನ್ನಮನಂಬನವಾಸಿದೇಶಮಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ .** **1X3=3**

31) "ಊರು ಉಪಕಾರ ಅರಿಯದು ; ಹೆಣ ಶೃಂಗಾರ ಅರಿಯದು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ .** **1X3=3**

32) ಕಟ್ಟುವುದು ಕಠಿಣ; ಕೆಡುಹುವುದು ಸುಲಭ

ಅಥವಾ

ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ

**IX . ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ** **6X3=18**

33) "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"

34) "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ"

35) "ಈತನ ಮಾತು ಅಶ್ರುತಪೂರ್ವಮ್"

36) "ಹೊಸ ಎಚ್ಚರದೊಳು ಬದುಕೋಣ"

37) "ಬ್ರಹ್ಮಾಂಡಗಳನು ಒಡೆಯಲು ಎಂದೋ ಬಲ್ಲರು"

38) "ಅರಸುಗಳ ವಾಜಿಯಂ ಬಿಡು"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ .** **1X4=4**

39) ಕೊಡಲಿ ____________________

____________________

____________________

____________________ ನಾನೆಷ್ಟಾ

ಅಥವಾ

ಸಿಕ್ಕದ್ದು ತಗೊಂಡು ______________

____________________

____________________

______________ ಹಾಡಿದೆನೆಣ್ಣಾ ಜನಕಾ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ .** 1X4=4

40) ನಿಮಗೆ ಪೊಡೆಮಟ್ಟು ಪೋಪೀ।
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ॥
ಸಮಕೊಳಿಸಲೆಂದು ಬಂದೆನೆ।
ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ॥

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ .** **2X4=8**

41) ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

ಅಥವಾ

ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

42) **'ಹಸುರು'** ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

ಅಥವಾ

ಪ್ರಕೃತಿಯ **'ಹಸುರು'** ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ .** 1X4=4 [2+2]

ಯುಗಾದಿ ಬಂತೆಂದರೆ ಭಾರತೀಯರು ಹಬ್ಬದ ಸಂಭ್ರಮದಲ್ಲಿ ಪುಳಕಿತಗೊಳ್ಳುತ್ತಾರೆ. ಹಸುರಿನ ಉಸಿರಿಗೆ ಮನಬಿಚ್ಚಿ ಮಾತನಾಡುತ್ತಾರೆ. ಮನೆಗಳಿಗೆ ಬೇವು–ಮಾವಿನ ಎಲೆಗಳಿಂದ ಸಿಂಗಾರ ಮಾಡಿ ಆನಂದಿಸುತ್ತಾರೆ. ಸಿಹಿಸಿಹಿಯಾದ ವಿವಿಧ ರೀತಿಯ ಹೋಳಿಗೆ, ಉಂಡೆಗಳನ್ನು, ಖಾದ್ಯಗಳನ್ನು ತಯಾರಿಸಿ ಆಸ್ವಾದಿಸುತ್ತಾರೆ. ಹಸುರು ತಿನ್ನುವ ಪ್ರಾಣಿ–ಪಕ್ಷಿಗಳ ಆನಂದ ಇಮ್ಮಡಿಯಾಗಿರುತ್ತದೆ. ವರ್ಷದ ಆರಂಭದಲ್ಲಿ ಬರುವ ಯುಗಾದಿಯು ತನ್ನ ಜೊತೆ ಸುಗ್ಗಿಯ, ಸಂತೋಷದ ವಾತಾವರಣವನ್ನು ಜಗಕ್ಕೆಲ್ಲ ತರುತ್ತದೆ. ಪ್ರಕೃತಿಯು ಇಳೆಗೆ ಸಂಭ್ರಮವನ್ನು ತಂದೊಡ್ಡುತ್ತದೆ. ಇದು ಚೈತ್ರಮಾಸದ ಸಂಕೇತ. ಈ ಚೈತ್ರ ಮಾಸ ಪ್ರಾರಂಭವಾದಾಗ ಬರಡಾದ ಜಗತ್ತಿನ ಮರಗಿಡಗಳಲ್ಲಿ, ಹೂ–ಹಣ್ಣುಗಳು ಹುಟ್ಟಿ ಸುಗ್ಗಿಯ ಕಾಲ ಪ್ರಾರಂಭವಾಗುತ್ತದೆ. ಚಳಿಗಾಲದಲ್ಲಿ ಮರಗಿಡಗಳ ಎಲೆಗಳು ಉದುರಿ ಕೊಂಬೆಗಳು ಬರಡಾದಂತೆ ಕಾಣುತ್ತವೆ. ವಸಂತನಾಗಮನದಿಂದ ಕೊಂಬೆಗಳು ಚಿಗುರೊಡೆದು ಹೊಸ ಉತ್ಸಾಹವನ್ನು ತುಂಬಿಕೊಳ್ಳುತ್ತವೆ. ಪ್ರಕೃತಿಯಲ್ಲಿ ನವ ಚೈತನ್ಯ ಮೂಡುತ್ತದೆ. ಭೂಮಿ ತಾಯಿ ನವವಧುವಿನಂತೆ ಕಾಣುತ್ತಾಳೆ. ಮರಗಿಡಗಳು ಮೈತುಂಬಿಕೊಂಡು ಮುಗುಳು ನಗುತ್ತವೆ. ಕೋಗಿಲೆಯ ಮಧುರ ಧ್ವನಿಯ ಜೊತೆಗೆ ಪಕ್ಷಿಗಳ ಚಿಲಿಪಿಲಿ ನಾದ ಕೇಳಿಬರುತ್ತದೆ. ಪ್ರಾಣಿ ಪಕ್ಷಿಗಳು ಮೈಕೊಡವಿಕೊಂಡು ಕೆಲಸಕ್ಕೆ ಸಿದ್ಧರಾದಂತೆ ಕಾಣುತ್ತವೆ.

**ಪ್ರಶ್ನೆಗಳು :**

**43)** **ಅ) ವಸಂತನಾಗಮನವಾದಾಗ ಪ್ರಕೃತಿಯಲ್ಲಿ ಯಾವ ರೀತಿಯ ಬದಲಾವಣೆಗಳು ಉಂಟಾಗುತ್ತವೆ ?**

**ಆ) ಯುಗಾದಿ ಬಂತೆಂದರೆ ಭಾರತೀಯರ ಸಂಭ್ರಮ ಹೇಗಿರುತ್ತದೆ ?**

XIV. **ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರವನ್ನು ಬರೆಯಿರಿ.** 1X5=5

44) ನಿಮ್ಮನ್ನು ಧಾರವಾಡದ ವಿವೇಕನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ **'ಪಾರಿಜಾತ'** ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ **'ಕಾನೂನು ಅರಿವು ಮತ್ತು ಜಾಗೃತ'** ಕಾರ್ಯಕ್ರಮದ ಬಗ್ಗೆ ವಿವರಿಸುತ್ತಾ ಗದಗ ದಲ್ಲಿ ವಾಸವಿರುವ ನಿಮ್ಮ ತಂದೆ **'ಮಣಿಕಂಠ'** ಎಂಬುವವರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಬೆಂಗಳೂರಿನ ಪಿ.ಸಿ ಬಡಾವಣೆಯ ಕಾರ್ಯಪ್ಪ ಪ್ರೌಢಶಾಲೆಯಲ್ಲಿ 10ನೇ ತರಗತಿಯಲ್ಲಿ ಓದುತ್ತಿರುವ **'ಭೀಮಪ್ಪ'** ಎಂದು ಬಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ .

XV. **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ .** 1X5=5

45) ಮಹಿಳಾ ಸಬಲೀಕರಣ

ಅಥವಾ

ರಾಷ್ಟ್ರೀಯ ಹಬ್ಬಗಳ ಮಹತ್ವ

❖ ❖ ❖ ❖ ❖ ❖ ❖

ಉಪನಿರ್ದೇಶಕರು ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ

## ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

## ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ 2024

**ವಿಷಯ : ಪ್ರಥಮ ಭಾಷೆ ಕನ್ನಡ** | **ಪತ್ರಿಕೆ–2** | **ಸಂಕೇತ ಸಂಖ್ಯೆ : 01K**

**ಸಮಯ : 3.15 ನಿಮಿಷ** | **ಗರಿಷ್ಠ ಅಂಕಗಳು : 100**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ .** **6X1=6**

1) "ಗಜೇಂದ್ರ " ಪದವು ಈ ಸಂಧಿಗೆ ಉದಾಹರಣೆಯಾಗಿದೆ;

ಎ) ಲೋಪ ಸಂಧಿ ಬಿ) ಆಗಮ ಸಂಧಿ

ಸಿ) ಆದೇಶ ಸಂಧಿ ಡಿ) ಗುಣ ಸಂಧಿ

2) ' ಬೆಟ್ಟದಾವರೆ ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ;

ಎ) ಕರ್ಮಧಾರಯ ಬಿ) ದ್ವಿಗು

ಸಿ) ತತ್ಪುರುಷ ಡಿ) ಗಮಕ

3) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ;

ಎ) ಸಾಮಾನ್ಯ ವಾಕ್ಯ ಬಿ) ಮಿಶ್ರ ವಾಕ್ಯ

ಸಿ) ಪ್ರಶ್ನಾರ್ಥಕ ವಾಕ್ಯ ಡಿ) ಸಂಯೋಜಿತ ವಾಕ್ಯ

4) ನೋಡು ಧಾತುವಿನ ವಿಧ್ಯರ್ಥಕ ರೂಪ;

ಎ) ನೋಡೇವು ಬಿ) ನೋಡಿಯಾರು

ಸಿ) ನೋಡರು ಡಿ) ನೋಡಲಿ

5) ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ ;

ಎ) 02 ಬಿ) 05

ಸಿ) 06 ಡಿ) 07

6) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ;

ಎ) ಉದ್ಧರಣ ಚಿಹ್ನೆ ಬಿ) ಆವರಣ ಚಿಹ್ನೆ

ಸಿ) ಭಾವಸೂಚಕ ಚಿಹ್ನೆ ಡಿ) ವಾಕ್ಯ ವೇಷ್ಟನ ಚಿಹ್ನೆ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4X1=4**

7) ಮಕ್ಕಳುಮರಿ : ಜೋಡುನುಡಿ : : ಓಡಿಓಡಿ : ____________

8) ಜಾಣ್ಮೆ : ತದ್ಧಿತಾಂತ ಭಾವನಾಮ : : ಅಂಜಿಕೆ : ____________________

9) ಕೂರ್ಮೆ : ಸ್ನೇಹ : : ತಮಾಲ : ____________________

10) ವಂದ್ಯಾ : ಬಂಜೆ : : ಕುಠಾರ : ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7X1=7**

11) ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?

12) ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ ?

13) ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು

14) ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

15) ನದೀಜಲಗಳು ಏನಾಗಿವೆ ?

16) ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು ?

17) ಪಶ್ಚಿಮ ಘಟ್ಟದ ಕಾಡುಗಳಲ್ಲಿ ಯಾವ ಗಿಡದ ಚಿಗುರು ಪೂಜಾರತಿಗೆ ಬಳಕೆಯಾಗುವುದು ?

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**IV. ಕೆಳಗಿನ ಪ್ರಶೆಗಳಿಗೆ ಮೂರೂ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10X2=20**

18) ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿತ್ತಾರೆ ?

19) ಗುರೂಪದೇಶಗಳನ್ನು ಪಟ್ಟಿ ಮಾಡಿ ?

20) ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ?

21) ನೆಹರೂ ಅವರು ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿರುವ ಮಾತುಗಳಾವುವು?

22) ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

23) ಹೊಸ ಭರವಸೆಗಳನ್ನ ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕು?

24) ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

25) ಭಗತ್‌ಸಿಂಗ್ ಹೇಗೆ ಅಮರನಾದನು?

26) ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

27) ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು ?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2X3=6**

28) ವಿ.ಕೃ ಗೋಕಾಕ್

29) ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ :** 1X3=3

30) ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

**VII . ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ .** **1X3=3**

31) "ಮಾರಿಗೌತಣವಾಯ್ತು ನಾಳಿನ ಭಾರತವು "

**VIII . ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ .** **1X3=3**

32) ಮಾತೇ ಮುತ್ತು;ಮಾತೇ ಮೃತ್ಯು

ಅಥವಾ

ಕೂಡಿ ಬಾಳಿದರೆ ಸ್ವರ್ಗಸುಖ

**IX . ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ** **6X3=18**

33) "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"

34) "ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ"

35) "ಪೊನ್ನೆಲ್ಲಮಂ ನೀನೆ ಕೊಂಡೆ"

36) "ಹೊಡೆದರೂ ಗುಂಡು ಕರುಣೆ ಇಲ್ಲದ್ಹಂಗ"

37) "ಬೇರೆ ಬಣ್ಣವನೆ ಕಾಣೆ "

38) "ತನ್ನ ಮಾತೆಯುಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ .** **1X4=4**

39) ನೀಲಮೇಘಮಂಡಲ ____________________
______________________________________
______________________________________
______________________________________
________________________ ನೋಡಿದಿರಾ ?

ಅಥವಾ

ಯುಗಯುಗಗಳ ____________________
______________________________________
______________________________________
______________________________________
________________________ ನೋಡಿದಿರಾ ?

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ .** 1X4=4

40) ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ .** **2X4=8**

41) ದುಷ್ಟಬುದ್ಧಿಯ ತಂತ್ರ ಆತನಿಗೆ ತಿರುಗುಬಾಣವಾದ ಬಗೆಯನ್ನು ಕುರಿತು ಬರೆಯಿರಿ .

ಅಥವಾ

ದುಷ್ಟಬುದ್ಧಿ ಹಾಗೂ ಧರ್ಮಬುದ್ಧಿ ಧರ್ಮಾಧಿಕಾರಣರ ಬಳಿಗೆ ಬರಲು ಕಾರಣವೇನು ? ವಿವರಿಸಿ

42) ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?

ಅಥವಾ

ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ .** 1X4=4 [2+2]

43) ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು . ಶಕ್ತನಿಗೆ ಎಲ್ಲರೂ ಆಪ್ತರು; ಅಶಕ್ತನನ್ನು ಎಲ್ಲರೂ ತಿರಸ್ಕರಿಸುವರು. ದೇಹ,ಮನಸ್ಸು ಸರಿಯಾಗಿರುವ ನಾವು ಸಿಕ್ಕ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡು ಶಕ್ತಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಳ್ಳಬೇಕು.ದೈಹಿಕ, ಮಾನಸಿಕ, ಬೌದ್ಧಿಕ. ನೈತಿಕ ಬಲಗಳ ಜೊತೆಗೆ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಶಕ್ತಿ ಸೌಭಾಗ್ಯ ಚಿರಜೀವನದ ಒಳಗುಟ್ಟು ದುರ್ಬಲತೆ ಎಂಬುದು ಚಿಂತೆ ದುಃಖಗಳ ಮೂಲ ಎಂದ ಸ್ವಾಮಿ ವಿವೇಕಾನಂದರು " ಬಲಿಷ್ಠರಾಗಿ , ಕಬ್ಬಿಣದ ಮಾಂಸಖಂಡ , ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿ ಬಲಗಾಲನ್ನು ಬಳಸಿಕೊಂಡು ನಿಮ್ಮ ಕಾಲ ಮೇಲೆ ನಿಲ್ಲಿ " ಎಂದು ತಿರುತಿರುಗಿ ಸಾರಿದರು. ನಮ್ಮನ್ನು ದುರ್ಬಲಗೊಳಿಸುವ ನೂರಾರು ಕತೆ,ಘಟನೆ ಚಿತ್ರಗಳು ನಿತ್ಯವೂ ಪ್ರಸಾರವಾಗುತ್ತಿರಬಹುದು. ಇವು ಯುವಕರ ಮನಸ್ಸನ್ನು ತಲ್ಲಣಗೊಳಿಸಬಹುದು. ಆದರೆ ಇದನ್ನು ದಾಟಿ ಮೇಲೇರಲು ಬೇಕಾದ ಶಕ್ತಿ ನಮ್ಮಲ್ಲಿಯೇ ಇದೆ. ಪ್ರತಿಯೊಬ್ಬನ ಮನಸ್ಸಿನ ಆಳದಲ್ಲಿ ದೈವೀಶಕ್ತಿ ಇದೆ . ಅಪಾರ ಶಕ್ತಿ ಇದ್ದರು ನಾವು ಗುಲಾಮರಂತೆ ವರ್ತಿಸುತ್ತೇವೆ. ಇದಕ್ಕೆ ಕಾರಣ ಒಂದು ಅಜ್ಞಾನ; ಇನ್ನೊಂದು ಬಾಲ್ಯದಿಂದ ಬೆಳೆಸಿಕೊಂಡು ಬಂಡ ನಿಷೇಧಾತ್ಮಕಭಾವನೆ. ಪ್ರತಿಯೊಂದು ನಿಷೇಧಾತ್ಮಕ ಭಾವನೆ ಅಥವಾ ಯೋಚನೆ ಒಳಗಿನ ಅಪಾರ ಆ ಅಪಾರ ಶಕ್ತಿಯನ್ನು ಪರಿಮಿತಗೊಳಿಸಿ,ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ. ಪ್ರತಿಯೊಂದು ಆತ್ಮವಿಶ್ವಾಸದ ಭಾವನೆ ಮತ್ತು ರಚನಾತ್ಮಕ ಯೋಚನೆ ನಮ್ಮ ಅಭ್ಯುದಯಕ್ಕೆ ನೆರವಾಗುತ್ತದೆ.

**ಪ್ರಶ್ನೆಗಳು :**

ಎ) ಅಪಾರ ಶಕ್ತಿ ಇದ್ದರೂ ಗುಲಾಮರಂತೆ ವರ್ತಿಸಲು ಕಾರಣವೇನು ?

ಬಿ) ಸ್ವಾಮಿ ವಿವೇಕಾನಂದರು ಯುವಕರಿಗೆ ನೀಡಿದ ಸಂದೇಶವೇನು ? ತಿಳಿಸಿ .

XIV. ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರವನ್ನು ಬರೆಯಿರಿ. 1X5=5

44) ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ ' ದರ್ಶಿನಿ ' ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ನೀಡುವಂತೆ ಕೋರಿ , ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರವನ್ನು ಬರೆಯಿರಿ .

ಅಥವಾ

ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯ 'ಚೇತನ್' ಎಂದು ಭಾವಿಸಿಕೊಂಡು, ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಅನುಮತಿ ಹಾಗೂ 3000 ರೂ. ಗಳನ್ನೂ ಕಳುಹಿಸಿ ಕೊಡುವಂತೆ ಕೋರಿ, ಶಿವಮೊಗ್ಗದ ಕುವೆಂಪುನಗರದಲ್ಲಿ ವಾಸವಾಗಿರುವ 'ರಾಮಚಂದ್ರ' ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಪತ್ರವನ್ನು ಬರೆಯಿರಿ .

XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ . 1X5=5

45) ಸ್ವಚ್ಛ ಭಾರತ ಅಭಿಯಾನ

ಅಥವಾ

ಮತದಾರರ ಸಾಕ್ಷರತಾ ಸಂಘ

❖ ❖ ❖ ❖ ❖ ❖ ❖

# ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

## ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ 2024

**ವಿಷಯ : ಪ್ರಥಮ ಭಾಷೆ ಕನ್ನಡ** | **ಸಂಕೇತ ಸಂಖ್ಯೆ : 01K**

**ಪತ್ರಿಕೆ–3**

**ಸಮಯ : 3.15 ನಿಮಿಷ** | **ಗರಿಷ್ಠ ಅಂಕಗಳು : 100**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6x1=6**

1. **"ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ"** ಈ ವಾಕ್ಯದಲ್ಲಿರುವ ಕಾಲಸೂಚಕ ಪ್ರತ್ಯಯ ;
   (ಎ) ಗಳ (ಬಿ) ಅಲ್ಲಿ
   (ಸಿ) ಉತ್ತ (ಡಿ) ಅದೆ
2. **'ಅನ್ವರ್ಥನಾಮ'** ಪದಕ್ಕೆ ಉದಾಹರಣೆಯಿದು ;
   (ಎ) ವ್ಯಾಪಾರಿ (ಬಿ) ಮನುಷ್ಯ
   (ಸಿ) ಆಗ್ನೇಯ (ಡಿ) ಕಮಲಾಕ್ಷ
3. **'ಮರದತ್ತಣಿಂ'** ಪದದಲ್ಲಿರುವ ವಿಭಕ್ತಿ ಪ್ರತ್ಯಯದ ಹೆಸರು;
   (ಎ) ಚತುರ್ಥೀ (ಬಿ) ಪಂಚಮೀ
   (ಸಿ) ಷಷ್ಠೀ (ಡಿ) ಸಪ್ತಮೀ
4. **"ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ"** ಅಂತಹ ವಾಕ್ಯವು ;
   (ಎ) ನಿಷೇಧಿತ ವಾಕ್ಯ (ಬಿ) ಮಿಶ್ರ ವಾಕ್ಯ
   (ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ
5. **'ತದ್ಧಿತಾಂತ ಅವ್ಯಯಕ್ಕೆ'** ಉದಾಹರಣೆಯಾದ ಪದವಿದು ;
   (ಎ) ಜಾಣತನ (ಬಿ) ಕನ್ನಡತಿ
   (ಸಿ) ಚಂದ್ರನಂತೆ (ಡಿ) ಉಡುಗೆ
6. ಕೊಟ್ಟಿರುವ ಧಾತುಗಳಲ್ಲಿ **'ಅಕರ್ಮಕ'** ಧಾತು ಪದವಿದು ;
   (ಎ) ಕೊಡು (ಬಿ) ಬಿಡು
   (ಸಿ) ಓಡು (ಡಿ) ನೋಡು

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4x1=4**

7. ವಿಜ್ಞಾನ : ಬಿನ್ನಾಣ : : ತಪಸ್ವಿ : ____________________
8. ಕೈವಾರ : ಹೊಗಳಿಕೆ : : ಗಡಣ : ____________________
9. ಸ್ವಾಮಿದ್ರೋಹ : ತತ್ಪುರುಷ ಸಮಾಸ : : ಮುಂಗೈ : ____________________
10. ನಟ್ಟನಡುವೆ : ದ್ವಿರುಕ್ತಿ : : ಕರಿನರೆ : ____________________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

11. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?
13. ಮನೆಯಲ್ಲೊಂದು ಪುಟ್ಟ ಮಗುವಿನ ಅಳುವನ್ನು ಕೇಳಲು ಯಾರು ತುದಿಗಾಲಲ್ಲಿ ನಿಂತು ಕಾಯುತ್ತಿದ್ದರು?
14. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?
15. ರಾಮನ ಯಜ್ಞಾಶ್ವವು ಯಾರ ಆಶ್ರಮದ ಮುಂದೆ ಬಂದಿತ್ತು?
16. ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಪರಶುರಾಮನು ಹೇಗೆ ಪೂಜಿಸಿದನು?
17. ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಹೇಗೆ ಬೆಳೆದು ನಿಂತಿವೆ?

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

18. ಶಬರಿಯು ರಾಮನ ಗುಣವನ್ನು ಹೇಗೆ ಹಾಡಿ ಹೊಗಳುತ್ತಾಳೆ?
19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
20. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?
21. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
22. ಕೃಷ್ಣನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತಿದನು?
23. ದ್ರುಪದನ ಅಹಂಕಾರದ ಮಾತುಗಳಿಗೆ ದ್ರೋಣನು ನೀಡಿದ ಪ್ರತ್ಯುತ್ತರವೇನು?
24. ಪೆರಿಯಾರ್ ಚಳುವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.
25. ಜನರಲ್ ಡಯರ್‌ನ ಪೈಶಾಚಿಕ ಕೃತ್ಯವನ್ನು ಕುರಿತು ತಿಳಿಸಿ.
26. ಯಾವ ಯಾವ ವಸ್ತುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು?
27. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2x3=6**

28. ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯ
29. ಲಕ್ಷ್ಮೀಶ

**VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1x3=3**

30. ನೆನೆಯದಿರಣ್ಣ ಭಾರತದೊಳಂ ಪೆರರಾರುಮನೊಂದೆ ಚಿತ್ತದಿಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.** **1x3=3**

31. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1x3=3**

32. ತಾಳಿದವನು ಬಾಳಿಯಾನು

ಅಥವಾ

ಕೈ ಕೆಸರಾದರೆ ಬಾಯಿ ಮೊಸರು

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6x3=18**

33. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"
34. ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಳ್ಗುಮದಂ ನೋಡಿ"
35. "ಹುಸಿಯದ ಬೇಹಾರಿಯೇ ಇಲ್ಲ."
36. "ಹೊಸ ಭರವಸೆಗಳ ಕಟ್ಟೋಣ."
37. "ಜೀವ ಸತ್ತು ಹೋಗುವುದು ಗೊತ್ತ"
38. "ರವಿಸುತನ ಕಿವಿಯಲಿ ಬಿತ್ತಿದನು ಭಯವ."

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

39. ಹಸುರಾಗಸ ______________________

______________________________

______________________________

____________________________ಬಿಸಿಲು

ಅಥವಾ

ಹೊಸ ಹೂವಿನ ____________________

______________________________

______________________________

__________________________ಯುಸಿರೂ!

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕ ವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1x4=4**

40. ನೀಲಮೇಘಮಂಡಲ–ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2x4=8**

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

ಅಥವಾ

'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

42. ಭೀಷ್ಮ ಮತ್ತು ದುರ್ಯೋಧನ ರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

ಅಥವಾ

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4 (2+2)**

ಸಿ.ವಿ.ರಾಮನ್ ಶಿಷ್ಯರನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರನ್ನು ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣಾಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯರೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು :

43. 1. ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?
2. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

**XIV. ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

44. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಭರತ್ ಹೆಗಡೆ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಕುಡಿಯುವ ನೀರು ಒದಗಿಸುವಂತೆ ಕೋರಿ, ಮಹಾನಗರಪಾಲಿಕೆಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯ 'ಸಂಗೀತಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸುವ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ, ಬಳ್ಳಾರಿಯ ಕುವೆಂಪು ನಗರದಲ್ಲಿ ವಾಸವಾಗಿರುವ 'ವಿಜಯಲಕ್ಷ್ಮಿ' ಎಂಬ ಹೆಸರಿನ ನಿಮ್ಮ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

45. ಪ್ರಧಾನ ಮಂತ್ರಿ ಪೋಷಣ್ ಯೋಜನೆ (ಅಕ್ಷರ ದಾಸೋಹ)

**ಅಥವಾ**

ಗ್ರಂಥಾಲಯಗಳ ಮಹತ್ತ್ವ

❖ ❖ ❖ ❖ ❖ ❖ ❖

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಜಿಲ್ಲೆ ಕೋಲಾರ

## ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

### ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ 2024

**ವಿಷಯ : ಪ್ರಥಮ ಭಾಷೆ ಕನ್ನಡ** | **ಪತ್ರಿಕೆ-4** | **ಸಂಕೇತ ಸಂಖ್ಯೆ : 01K**

**ಸಮಯ : 3.15 ನಿಮಿಷ** | **ಗರಿಷ್ಠ ಅಂಕಗಳು : 100**

---

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6x1=6**

1. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಚಿನ್ಹೆ
   ಎ) ಅಲ್ಪವಿರಾಮ ಬಿ) ಆವರಣ
   ಸಿ) ಉದ್ಧರಣ ಡಿ) ಭಾವಸೂಚಕ
2. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವನ್ನು ಹೀಗೆ ಕರೆಯುವರು;
   ಎ) ಸಾಮಾನ್ಯವಾಕ್ಯ ಬಿ) ಮಿಶ್ರವಾಕ್ಯ
   ಸಿ) ಸಂಯೋಜಿತವಾಕ್ಯ ಡಿ) ಪ್ರಶ್ನಾರ್ಥಕವಾಕ್ಯ
3. ಇವುಗಳಲ್ಲಿ ನಿಷೇಧಾರ್ಥಕ ಕ್ರಿಯಾಪದವಿದು;
   ಎ) ಮಾಡಲಿ ಬಿ) ಮಾಡಿಯಾವು
   ಸಿ) ಮಾಡದು ಡಿ) ಮಾಡೀತು.
4. 'ಸನ್ಮಂಗಳ' ಪದವು ಈ ಸಂಧಿಗೆ ಸೇರಿದೆ;
   ಎ) ಆದೇಶಸಂಧಿ ಬಿ) ಸವರ್ಣದೀರ್ಘಸಂಧಿ
   ಸಿ) ವೃದ್ಧಿಸಂಧಿ ಡಿ) ಅನುನಾಸಿಕ ಸಂಧಿ
5. ಸಪ್ತಮೀ ವಿಭಕ್ತಿ ಪ್ರತ್ಯಯದ ಕಾರಕಾರ್ಥ;
   ಎ) ಸಂಪ್ರದಾನ, ಬಿ) ಅಧಿಕರಣ
   ಸಿ) ಕರ್ಮಾರ್ಥ ಡಿ) ಅಪದಾನ
6. 'ಮೂವರು' ಎಂಬ ಪದ ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
   ಎ) ಸಂಖ್ಯಾವಾಚಕ ಬಿ) ಸಂಖ್ಯೇಯವಾಚಕ
   ಸಿ) ದಿಗ್ವಾಚಕ ಡಿ) ಪರಿಮಾಣ ವಾಚಕ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** 4x1=4

7. ಮುಕ್ಕಣ್ಣು : ದ್ವಿಗು ಸಮಾಸ : : ಕಂಗೆಡು : ____________________
8. ಚಂದ್ರನಂತೆ : ತದ್ಧಿತಾಂತಾವ್ಯಯ : : ಸಿರಿವಂತ : ____________________
9. ಹಣ್ಣು ಹಂಪಲು : ಜೋಡು ನುಡಿ : : ಅಬ್ಬಬ್ಬಾ : ____________________
10. ಬಣ್ಣ : ವರ್ಣ : : ಅಂಗಳ : ____________________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** 7x1=7

11. ಸೌಮಿತ್ರಿ ಎಂದು ಯಾರನ್ನು ಕರೆಯುತ್ತಾರೆ ?
12. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?
13. ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ ?
14. ಸುಕುಮಾರಸ್ವಾಮಿಯ ತಂದೆ ತಾಯಿಗಳ ಹೆಸರೇನು ?
15. ಹಲಗಲಿಯ ನಾಲ್ವರು ಪ್ರಮುಖರು ಯಾರು ?
16. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ ?
17. ಯಾರಿಗೆ ವಸಂತ ಮುಖ ತೋರಲಿಲ್ಲ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10x2=20

18. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ ?
19. ರಾಜರ ಪ್ರಕೃತಿ ಹೇಗಿರುತ್ತದೆ ?

20. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯನವರು ಮಾಡಿದ ಮಾರ್ಪಾಡುಗಳಾವುವು ?
21. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?
22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?
23. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?
24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?
25. ತಮಿಳುನಾಡಿನ ರಾಜಕೀಯ ಕ್ಷೇತ್ರಗಳಲ್ಲಿ ಪೆರಿಯಾರ್ ರವರು ಹೇಗೆ ಉಳಿದುಕೊಡಿದ್ದಾರೆ?
26. ಯಾವ ಯಾವ ವಸ್ತುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು ?
27. ಪ್ರಾಸ ತೊರೆಯುವ ವಿಚಾರ ಕುರಿತು ಗೋವಿಂದ ಪೈ ಅವರ ನಿರ್ಧಾರವೇನು ?

**V. ಕೆಳಗಿನ ಕವಿಗಳ ಅಥವಾ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** 2x3=6

28. ಪು.ತಿ.ನ
29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** 1x3=3

30. ಸತಿಮಡಿಸಿ ನೀಡುವೆಲೆ ವಿಡಿದಕೈ ಬಸವಳಿದು
ದತಿಚಿಂತೆ ಯೊಳು ಮರೆದ ತನುಜೊಮ್ಮುವಿಡಿದಪು
ರ್ಬತಿಭಾರ ವಾಗಿಕ ಣ್ಮುಚ್ಚಿತೋಳ್ ತೊಡೆಮಿಡುಕೆ ಸೂಯ್ ಸೋಸೆ ನಿದ್ರೆ ಕವಿದು.

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ.** 1x3=3

31. "ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** 1x3=3

32. ದೇಶ ಸುತ್ತು ; ಕೋಶ ಓದು

ಅಥವಾ

ಆಳಾಗಬಲ್ಲವನು ಅರಸನಾಗಬಲ್ಲ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ** 6x3=18

33. "ಸಾಮಾಜಿಕ ಕಾನೂನುಗಳ ಹರಿಕಾರ"
34. "ಅಡಿಗಡಿಗೆ ಇತಿಹಾಸವನ್ನು ದಾಟುತ್ತೇವೆ! ಎಂಥ ವಿಚಿತ್ರ!"
35. "ಪ್ರಕೃತಿ ವಿಕೃತಿಯಾದಡೆ ಮನುಷ್ಯನಾಯುಷ್ಯಂ ಕುಂದುಗಂ"
36. "ಬಲ್ಲರು ಯಾರಾ ಹಾಕಿದ ಹೊಂಚ"
37. "ಜೀಯ ಹಸಾದವೆಂಬುದು ಕಷ್ಟ"
38. "ಮೇಣಾಯ್ತು ಕೌರವಂಗವನಿತಳಂ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** 1x4=4

39. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

________________________________________

________________________________________

________________________________________

________________________________________

ಗುರ್ವಿತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

ಅಥವಾ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ

________________________________________

________________________________________

________________________________________

________________________________________

ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** 1x4=4

40. ಅಂತೆಂಬನಾರ್ಗ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಳೆಂತೆನಗೆ ಕಳೆಯನೇ ನೂಂ
ಕಂತಪ್ಪನನರಿಯೆನೆಂದು ಸಭೆಯೊಳ್ ನುಡಿದಂ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 2x4=8

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು ?

ಅಥವಾ

ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಜಿ. ಎಸ್. ಶಿವರುದ್ರಪ್ಪನವರ ಆಶಯವಾಗಿದೆ ? ತಿಳಿಸಿ.

ಅಥವಾ

ಸಂಕಲ್ಪ ಮತ್ತು ಅನುಷ್ಠಾನ ಕುರಿತು ಕವಿ ಜಿ. ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿ** 1x4=4 (2+2)

ರೈತರನ್ನು 'ಅನ್ನದಾತ' ದೇಶದ 'ಬೆನ್ನೆಲುಬು' ಎಂದೆಲ್ಲ ಕರೆಯುತ್ತಾರೆ. ಆದರೆ ಇಂದು ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಿಸರ್ಗದ ಜೊತೆ ಸೆಣೆಸಾಡಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ರೋಗಗಳು ತಗುಲಿ ಬೆಳೆ ಸಿಗದ ಸಮಸ್ಯೆ, ಬೆಳೆ ಬೆಳೆದರೂ ಸರಿಯಾದ ಬೆಲೆ ಸಿಗದೆ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ, ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಗೆಡ್ಡೆ-ಗೆಣಸುಗಳನ್ನು ತಿಂದು, ಎಲೆಗಳ ರಸ ಕುಡಿದು ಬದುಕುವ ಕಾಲ ಮತ್ತೆ ಬರಬಹುದು. ಆಹಾರಕ್ಕಾಗಿ ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಹೋರಾಟ ಏರ್ಪಡಬಹುದು. ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ. ಅಕ್ಕಿ, ರಾಗಿ, ಗೋಧಿ, ಜೋಳ, ತರಕಾರಿಗಳನ್ನು ತಯಾರಿಸುವ ಯಾವ ಕಾರ್ಖಾನೆಗಳು ಇಲ್ಲ. ಇವಕ್ಕೆಲ್ಲ ರೈತರ ಬೆವರು ಭೂಮಿಗೆ ಸುರಿಯಬೇಕು.

43. ಅ) ರೈತರು ಎದುರುಸುತ್ತಿರುವ ಸಮಸ್ಯೆಗಳಾವುವು ?
ಆ) ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ: ಪತ್ರ ಬರೆಯಿರಿ.** 1x5=5

44. ನಿಮ್ಮನ್ನು ಚಿಕ್ಕಬಳ್ಳಾಪುರದ ಕುವೆಂಪು ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸೃಜನ್' ಎಂದು ಭಾವಿಸಿಕೊಂಡು ಹತ್ತು ಕನ್ನಡ ನಿಘಂಟು ಪ್ರತಿಗಳನ್ನು ಕಳುಹಿಸಿಕೊಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಒಂದು ಪ್ರತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸಾನ್ವಿತ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಕುರಿತು, ಕೋಲಾರದಲ್ಲಿ ವಾಸವಿರುವ 'ರಂಜಿತ' ಎಂಬ ಹೆಸರಿನ ನಿಮ್ಮ ಅಕ್ಕ ನವರಿಗೆ ಒಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** 1x5=5

45. ಚಂದ್ರಯಾನ-3

ಅಥವಾ

ರಾಷ್ಟ್ರೀಯ ಭಾವೈಕ್ಯತೆ

❖ ❖ ❖ ❖ ❖ ❖ ❖

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

# ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

## ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆ ಪತ್ರಿಕೆ 2024

**ವಿಷಯ : ಪ್ರಥಮ ಭಾಷೆ ಕನ್ನಡ** | **ಪತ್ರಿಕೆ–5** | **ಸಂಕೇತ ಸಂಖ್ಯೆ : 01K**

**ಸಮಯ : 3.15 ನಿಮಿಷ** | **ಗರಿಷ್ಠ ಅಂಕಗಳು : 100**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** 6x1=6

1. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವಸ್ವರಗಳ ಸಂಖ್ಯೆ.
   ಎ) 7 ಬಿ) 6
   ಸಿ) 8 ಡಿ) 5
2. 'ಬಿರುಗಾಳಿಗೆ ಮರದಿಂದ ಹಣ್ಣುಗಳು ರಸ್ತೆಯ ಮೇಲೆ ಬಿದ್ದಿವೆ' ಈ ವಾಕ್ಯದಲ್ಲಿರುವ 'ಮರದಿಂದ' ಪದವು ಈ ವಿಭಕ್ತಿಯಲ್ಲಿದೆ.
   ಎ) ಪ್ರಥಮ ಬಿ) ದ್ವಿತೀಯ
   ಸಿ) ಚತುರ್ಥಿ ಡಿ) ತೃತೀಯ
3. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
   ಎ) ವಿವರಣಾತ್ಮಕ ಚಿಹ್ನೆ ಬಿ) ವಾಕ್ಯವೇಷ್ಟನ ಚಿಹ್ನೆ
   ಸಿ) ಆವರಣ ಚಿಹ್ನೆ ಡಿ) ಭಾವಸೂಚಕ ಚಿಹ್ನೆ
4. ಇವುಗಳಲ್ಲಿ ಅನುನಾಸಿಕ ಸಂಧಿಗೆ ಉದಾಹರಣೆ ಪದವಿದು
   ಎ) ಜನೈಕ್ಯ ಬಿ) ಆಜಂತ
   ಸಿ) ತನ್ಮಯ ಡಿ) ಗಿರೀಶ
5. ಕಾವ್ಯವನ್ನು ಓದುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳ.
   ಎ) ಪ್ರಾಸ ಬಿ) ಯತಿ
   ಸಿ) ಗಣ ಡಿ) ಮಾತ್ರೆ
6. ಕಟ್ಟು – ಧಾತುವಿನ ಸಂಭವನಾರ್ಥಕ ರೂಪ
   ಎ) ಕಟ್ಟಲಿ ಬಿ) ಕಟ್ಟನು
   ಸಿ) ಕಟ್ಟಿಯಾನು ಡಿ) ಕಟ್ಟು

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ:** 4x1=4

7. ಮತ್ತು : ಸಂಬಂಧಾರ್ಥಕಾವ್ಯಯ : : ಥಟ್ಟನೆ : ___________
8. ನಡುರಾತ್ರಿ : ಅಂಶಿ ಸಮಾಸ : : ಧೈರ್ಯಗುಂದು : ___________
9. ಅಂಜಿಕೆ : ಕೃದಂತಭಾವನಾಮ : : ಶಾಲೆಯತನಕ : ___________
10. ರಾಜೀವಸಖ : ಸೂರ್ಯ : : ಮುರಾರಿ : ___________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** 7x1=7

11. ರಾಹಿಲನು ಯಾರು ?
12. ಕಲುಷಿತವಾಗಿರುವುದು ಏನು?
13. ಯಶೋಭದ್ರೆಯು ರತ್ನಗಂಬಳಿಯನ್ನು ಯಾರಿಗೆ ಕೊಟ್ಟಳು?
14. ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ?
15. ದ್ರೋಣನು ಪರಶುರಾಮನಲ್ಲಿಗೆ ಏಕೆ ಬಂದರು?
16. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು??
17. ನಾರಾಯಣಗುರು ಅವರ ಪ್ರಮುಖ ಆಶಯ ಏನಾಗಿತ್ತು?

ಉಪನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಜಿಲ್ಲೆ ಕೋಲಾರ

**IV. ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10x2=20

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿರಿ.
19. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
20. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳಾವುವು?
21. ಅಂದವಾದ ಬರವಣಿಗೆಯ ಬಗೆಗೆ ಗಾಂಧೀಜಿ ಅವರ ಅಭಿಪ್ರಾಯವೇನು?
22. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?
23. ಪರಶುರಾಮನು ಮಣ್ಣಿನ ಪಾತ್ರಯಲ್ಲಿ ಆರ್ಘ್ಯವನ್ನು ಕೊಡಲು ಕಾರಣವೇನು?
24. ಯಾವ ಯಾವ ವಸ್ತುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು?
25. ಮುದ್ದಣ್ಣ ಅವರು ಗೋವಿಂದ ಪೈ ಅವರಿಗೆ ಏನೆಂದು ಸಲಹೆ ನೀಡಿದರು?
26. ಸುಕುಮಾರಸ್ವಾಮಿಯು ಹೇಗೆ ಸುಖ–ಭೋಗಗಳನ್ನು ಅನುಭವಿಸುತ್ತಿದ್ದನು?
27. ಭಗತ್‌ಸಿಂಗ್, ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ?

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** 2x3=6

28. ಸಾ. ರಾ ಅಬೂಬಕ್ಕರ್
29. ಕುಮಾರವ್ಯಾಸ

**VI. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** 1x3=3

30. ಏನು ಹೇಳ್ವೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.** 1x3=3

31. ಒಳಗಿನಮಂದಿ ಗುಂಡು ಹೊಡೆದರೊ ಮುಂಗಾರಿನ ಸಿಡಿಲ ಸಿಡಿದ್ಹಾಂಗ.

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** 1x3=3

32. ಮನಸ್ಸಿದ್ದರೆ ಮಾರ್ಗ
ಅಥವಾ
ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮೇಲು

**IX. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** 6x3=18

33. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"
34. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"
35. "ಪ್ರಕೃತಿ ವಿಕೃತಿಯಾದರೆ ಮನುಷ್ಯನಾಯುಷ್ಯಂ ಕುಂದುಗುಂ"
36. "ನಾಳಿನ ಕನಸನು ಬಿತ್ತೋಣ"
37. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
38. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"

**X . ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** 1x4=4

39. ನೆಲಕಿರಿವೆನೆಂದು ______________
__________________________
__________________________
______________ಪುದುವಾಳ್ದಪನೇ

**ಅಥವಾ**

ಪುಟ್ಟಿದ ನೂರ್ವರು______________
__________________________
__________________________
______________ಛಲಮನೆ ಮೆರೆವೆಂ

ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆ ಕೋಲಾರ

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** 1x4=4

40. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 2x4=8

41. ಸರ್. ಎಂ. ವಿಶ್ವೇಶ್ವರಯ್ಯ ಅವರು ಮೈಸೂರು ದಿವನರಾಗಿ ಸಲ್ಲಿಸಿದ ಸೇವೆಯನ್ನು ವಿವರಿಸಿರಿ.

**ಅಥವಾ**

ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ಕಂಕಣಬದ್ಧರಾದರು ಎಂಬುದನ್ನು ವಿವರಿಸಿರಿ.

42. ಹಲಗಲಿ ದಂಗೆಗೆ ಕಾರಣವೇನು ? ಸರ್ಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

**'ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊ ದಡಕ'** ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

**XIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 2x2=4 (2+2)

43. ಬೆಳಗಾವಿ ಪುರಾತನ ಕುಂತಳ ದೇಶದ ಭಾಗ. ಇಲ್ಲಿ ಅನೇಕ ಐತಿಹಾಸಿಕ ಕೋಟೆಗಳಿವೆ. ನಿಸರ್ಗ ರಮಣೀಯ ಸ್ಥಳಗಳಿವೆ. ಇಲ್ಲಿಯ ಬೆಟ್ಟ, ನದಿ, ಗೋಕಾಕ್ ದಬದಬೆ, ಗೊಡಚಿನಮಲ್ಕು ಜಲಪಾತ, ಮಾರ್ಕಂಡೇಯ ಜಲಪಾತಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಮಹಾದಾಯಿ ನದಿಯಿಂದ ಉಂಟಾದ ವಜ್ರಪೋಹ ಜಲಪಾತವು ಬೆಳಗಾವಿ ನಗರದಿಂದ ಸುಮಾರು 58 ಕಿಲೋಮೀಟರು ದೂರದಲ್ಲಿದೆ. ಪಶ್ಚಿಮ ಘಟ್ಟದ ಹಸಿರು ಕಾನನದ ನಡುವೆ ಸಾಗಿ ಬರುವ ಮಹಾದಾಯಿಯನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಸುಮಾರು 200 ಅಡಿಗಳ ಆಳಕ್ಕೆ ಧುಮುಕುವಾಗ ಬಂಡೆಗಳಿಗೆ ಅಪ್ಪಳಿಸಿ ತುಂತುರು ಹನಿಗಳಾಗಿ ಚಿಮ್ಮುತ್ತವೆ. ಪ್ರತಿಯೊಂದು ಹನಿಯ ಮೇಲೂ ಸೂರ್ಯನ ಕಿರಣಗಳು ಬಿದ್ದು, ಪ್ರತಿ ಹನಿಗೂ ವಜ್ರದ ಕಾಂತಿಯನ್ನು ತುಂಬುತ್ತಾನೆ. ಇಲ್ಲಿ ಸಹಸ್ರ ಹನಿಗಳು ವಜ್ರದಂತೆ ಹೊಳೆಯುತ್ತವೆ. ಈ ಕಾರಣದಿಂದ ಇದನ್ನು ವಜ್ರಪೋಹ ಜಲಪಾತವೆಂದು ಕರೆಯುವರು. ಇದು ಚಿತ್ತಾಕರ್ಷಕ ಸುಂದರ ಕಾಮನಬಿಲ್ಲನ್ನು ಸೃಷ್ಟಿಸಿ ನಿಸರ್ಗದ ಸೊಬಗಿಗೆ ಸರಿಸಮ ಮತ್ತೊಂದಿಲ್ಲ ಎಂಬುದನ್ನು ಸಾರುತ್ತದೆ.

**ಪ್ರಶ್ನೆಗಳು:**

ಅ) ಮಹಾದಾಯಿ ಜಲಪಾತಕ್ಕೆ ವಜ್ರಪೋಹ ಜಲಪಾತ ಎಂಬ ಹೆಸರು ಬರಲು ಕಾರಣವೇನು?

ಆ) ಬೆಳಗಾವಿ ಜಿಲ್ಲೆಯಲ್ಲಿನ ಪ್ರೇಕ್ಷಣೀಯ ಸ್ಥಳಗಳಾವುವು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 1x5=5

44. ನಿಮ್ಮನ್ನು ಸವಿತಾ/ ಸಂಜಯ್ ಸರ್ಕಾರಿ ಪ್ರೌಢಶಾಲೆ, ಮಾಲೂರು, ಕೋಲಾರ ಜಿಲ್ಲೆಯ ವಿದ್ಯಾರ್ಥಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಕೈಗೊಂಡ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಕುರಿತು ಮೈಸೂರಿನ ಕುವೆಂಪು ನಗರದಲ್ಲಿರುವ ನಿಮ್ಮ ಅಣ್ಣನಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಮಾಲೂರು ತಾಲ್ಲೂಕು ಮಂಗಾಪುರದ ಗ್ರಾಮಸ್ಥರೆಂದು ಭಾವಿಸಿಕೊಂಡು ನಿಮ್ಮ ಗ್ರಾಮಕ್ಕೆ ಬರಗಾಲದ ಪರಿಹಾರಗಳನ್ನು ಕೋರಿ ಕೋಲಾರ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳಿಗೊಂದು ಒಂದು ಮನವಿ ಪತ್ರ ಬರೆಯಿರಿ.

**XV. ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ:** 1x5=5

45. ಅ. ಸಾಮಾಜಿಕ ಪಿಡುಗುಗಳು

**ಅಥವಾ**

ಆ. ಗಣಕಯಂತ್ರದ ಬಳಕೆಯ ಅನುಕೂಲಗಳು ಮತ್ತು ಅನಾನುಕೂಲಗಳು

❖ ❖ ❖ ❖ ❖ ❖ ❖